



## ವಾರದ ಪತ್ರ

### ಕೋರ್ಟ್ ವಾದ ಬೀದಿಯಲ್ಲೇಕೆ?

‘ಭಾರ್ಗವಿ ಎಲ್‌ಎಲ್‌ಬಿ’ ಭಾರ್ಗವಿ ಎಂಬ ಹೆಸರಿನಲ್ಲೇ ದೋಷವಿದೆ. ಭಾರ್ಗವಿ ವಕೀಲೆ ಎಂದ ಮೇಲೆ ಅವಳು ಎಲ್.ಎಲ್.ಬಿ ಆಗಿರಲೇ ಬೇಕಲ್ಲವೆ? ಅದರ ಬದಲಾಗಿ ಅಡ್ವೊಕೇಟ್ ಭಾರ್ಗವಿ ಎಂದಿದ್ದರೆ ಹೆಚ್ಚು ಸಮಂಜಸವಾಗುತಿತ್ತು.

ಅಡ್ವೊಕೇಟ್ ಜೆ.ಪಿ. ಪಾಟೀಲ್ ಭಾರ್ಗವಿಗೆ ಫೋನಿನಲ್ಲಿ ಧಮ್ಕಿ ಹಾಕುವುದು ಅದಕ್ಕೆ ಭಾರ್ಗವಿ ಪ್ರತ್ಯುತ್ತರ ನೀಡುವುದು, ಕೋರ್ಟಿನ ಹೊರಗಡೆ ನಿಂತು ಇಬ್ಬರು ವಾದ ವಿವಾದದಲ್ಲಿ ತೊಡಗುವುದು, ಸೋಲು ಖಚಿತ ಎಂದು ಭಾರ್ಗವಿ ಹೇಳುವುದು ಅವಾಸ್ತವಿಕ.

ವಕೀಲರ ವಿರೋಧ ಕೋರ್ಟಿನಲ್ಲಿ ವಾದ ಮಾಡುವುದಕ್ಕಷ್ಟೆ ಸೀಮಿತ. ಕೋರ್ಟಿನ ಹೊರಗೆ ಅವರು ಸ್ನೇಹಿತರು. ಭಾರ್ಗವಿಯಲ್ಲಿ ತೋರಿಸಿರುವಂತೆ ಬಹಿರಂಗವಾಗಿ ಕಚ್ಚಾಡುವುದಿಲ್ಲ.

—ಮುರಳೀಧರ ಕುಲಕರ್ಣಿ, ಬೀದರ್

### ಮುದ್ರೆ ಮರೆತರೇಕೆ?

ಝೀ ಕನ್ನಡದ ‘ಪುಟ್ಟಕ್ಕನ ಮಕ್ಕಳು’ ಕಥೆಯಲ್ಲಿ ಪುಟ್ಟಕ್ಕನ ಮೆಸ್ ಮುಚ್ಚಿಸುವ ಹುನ್ನಾರ ನಡೆಯುತ್ತದೆ. ಸರ್ಕಾರಿ ಅಧಿಕಾರಿಗಳು ಬಂದು ಮೆಸ್ ಬಂದ್ ಮಾಡಿ, ಬಾಗಿಲಿಗೆ ನೋಟಿಸ್ ಅಂಟಿಸಿ, ಬೀಗ ಜಡಿಯುತ್ತಾರೆ. ಆದರೆ ಆ ಬೀಗಕ್ಕೆ ಬಟ್ಟೆ ಸುತ್ತಿ ಅರಗನ್ನು ಮೆತ್ತಿ ಮುದ್ರೆ ಹಾಕುವುದಿಲ್ಲ. ಇದು ಯಾವ ರೀತಿಯ ಬೀಗಮುದ್ರೆ? ಆರೋಪಿಗಳು ನಕಲಿ ಕೀ ಮಾಡಿಸಿ ಬಾಗಿಲು ತೆರೆದರೆ ತಿಳಿಯುವುದು ಹೇಗೆ? ಇದು ಅಧಿಕಾರಿಗಳ ಕರ್ತವ್ಯಲೋಪ ಮತ್ತು ಅರಿವಿನ ಕೊರತೆಯ ಸ್ಪಷ್ಟ ನಿದರ್ಶನವಾಗಿದೆ.

—ವಾ. ಮುರಳೀಧರ, ತೀರ್ಥಹಳ್ಳಿ

### ಯೋಗ ಸಾಧಕಿ ನೃತ್ಯಪಟು

ಯೋಗ ದಿನದ ಅಂಗವಾಗಿ ಯೋಗ, ಪ್ರಾಣಾಯಾಮ, ಧ್ಯಾನದ ಬಗ್ಗೆ ಕಾರ್ಯಕ್ರಮ ಮಾಡುತ್ತಿರುವುದು ಸ್ವಾಗತಾರ್ಹ. ಚಂದನದಲ್ಲಿ ಅನೇಕ ಯೋಗಪಟುಗಳು ಪರಿಚಯವನ್ನು ‘ಶುಭೋದಯ ಕರ್ನಾಟಕ’ದಲ್ಲಿ ಪರಿಚಯ ಮಾಡಿಕೊಟ್ಟಿದ್ದಾರೆ. ಬಹುಮುಖ ಪ್ರತಿಭೆ ವಿದುಷಿ ಗೌರಿ ಸಾಗರ್ ಅವರ ಸಂದರ್ಶನ ತುಂಬ ಚೆನ್ನಾಗಿತ್ತು. ಗೌರಿಯ ಭರತನಾಟ್ಯದ ವಿವಿಧ ಬಗೆಗಳನ್ನು ತೋರಿಸಿದ್ದು ಆಕರ್ಷಕವಾಗಿತ್ತು. ವಿದೇಶದಲ್ಲಿ ಕಾರ್ಯಕ್ರಮ ನೀಡಲು ಹೋದಾಗ ಆದ ಅಪಘಾತ ತಿಳಿದು ಬೇಸರ ಅನ್ನಿಸಿತು. ಧೈರ್ಯವಾಗಿ ಚೇತರಿಸಿಕೊಂಡು ಮತ್ತೆ ಸಹಜವಾಗಿ ತಮ್ಮ ದಿನಚರಿಯನ್ನು ಆರಂಭಿಸಿದ್ದು ಸಂತೋಷದ ಸಂಗತಿ.

—ಕಮಲಾದೇವಿ ರಾಜಶೇಖರ ಹಳ್ಳೂರ್

### ಯಾವ ಗಳಿಗೇಲಿ ಮೂರ್ಖರ ಪೆಟ್ಟಿಗೆ ಎಂದರು

ನಮ್ಮಲ್ಲಿ ಭಾಷಾಭೇದವಿಲ್ಲದೇ ಮನರಂಜನೆ ಎಂಬ ಹಿಂಸಾಪರ್ವವನ್ನು ಪ್ರಸಾರ ಮಾಡುತ್ತಿದ್ದಾರೆ ಎಂದು ಅನ್ನಿಸುತ್ತದೆ. ಇನ್ನು ಸುದ್ದಿ ಚಾನಲ್‌ಗಳಲ್ಲಿ ಕೇಕ್ ಮೇಲಿನ ಕ್ರೀಂನಂತೆ ರಸಭರಿತ ಕ್ರೈಂ ಸುದ್ದಿಗಳು. ವಾರದ ಕಡೆಗೆ ಬಂದರೆ ಕನ್ನಡ ವಾಹಿನಿಗಳಿಗೆ ಕನ್ನಡ ಸಿನಿಮಾಗಳ ಬರ. ರಿಯಾಲಿಟಿ ಶೋಗಳು ರಿಯಲ್ ಎಂಬ ಗಲಾಟೆ ಸಂಸಾರ. ಕುಕಿಂಗ್ ಶೋನ ಪ್ರೋಮೊದಲ್ಲೇ ಬರಿಯ ಅರಚಾಟ. ರಿಯಲ್ ನೋಡ ಹೊರಟರೆ ಅದೆಂತಹ ಅಡುಗೆಯಲ್ಲಿ ನೋಡುಗರನ್ನು ಬೇಯಿಸುತ್ತಾರೋ ತಿಳಿಯದು.

—ಕೆ.ಎಸ್. ಸೋಮೇಶ್ವರ

### ಮಹಾನಟಿಯರ ರಂಗಪ್ರವೇಶ

ಝೀ ಕನ್ನಡದ ‘ಮಹಾನಟಿ’ ಸೀಸನ್ 2ರ ಮೆಗಾ ಆಡಿಷನ್ ಆರಂಭವಾಗಿದೆ. ಕೆಲ ಹೊಸ ಪ್ರತಿಭೆಗಳು ರಂಗದ ಮೇಲೆ ತಮ್ಮ ಪ್ರತಿಭೆಯನ್ನು ಪ್ರತಿಬಿಂಬಿಸಿದ್ದಾರೆ. ಕೆಲವರ ಆಂಗಿಕ ಅಭಿನಯ, ಧ್ವನಿ ಬದಲಿಸಿ ಮಾತನಾಡುವ ಶೈಲಿ ಹೀಗೆ... ಅವರ ಪ್ರತಿಭೆ ಅನಾವರಣಗೊಂಡಿತು. ಕೆಲವರ ಹಿನ್ನೆಲೆ ಮನ ಕಲಕಿತು.

—ಭಾರತೀ ಗಂಗಾಧರ್, ಬೆಂಗಳೂರು

‘ಮಹಾನಟಿ’ ರಿಯಾಲಿಟಿ ಶೋಗೆ ಆಯ್ಕೆಯಾದ ದಿವ್ಯಾಂಜಲಿ, ಛಾಲ್ಕಿ ಹಿರೇಮಠದ ಸಂಸ್ಥಾನ ಮಠದಲ್ಲಿ ಬೆಳೆದ ಪ್ರತಿಭೆ. ಕಸದ ತೊಟ್ಟಿಯಲ್ಲಿ ಎಸೆಯುವ ಕಂದಮ್ಮಗಳ ಲಾಲನೆ ಪಾಲನೆಗೆ ಸಂಬಂಧಪಟ್ಟ ಸನ್ನಿವೇಶವನ್ನು ಆಕೆ ಕಣ್ಣಿಗೆ ಕಟ್ಟುವಂತೆ ಅಭಿನಯಿಸಿದರು. ಅದು ಸ್ವತಃ ಆಕೆಯ ಜೀವನದಲ್ಲಿಯೇ ನಡೆದ ಘಟನೆ ಎಂದು ತಿಳಿದು ಅಚ್ಚರಿಯಾಯಿತು. ಆಯ್ಕೆ ಆದದ್ದು ಸಂತೋಷವಾಯಿತು.

—ಕೆ.ಎಸ್. ಸವಿತ, ಬೆಂಗಳೂರು

### ಚಂದನದ ಸೊಗಸು

ಚಂದನದ ‘ಥಟ್ ಅಂತ ಹೇಳಿ’ ಅರ್ಥಪೂರ್ಣ ಕಾರ್ಯಕ್ರಮ. ಹತ್ತಾರು ವಿಶಿಷ್ಟ ಸಂಗತಿಯನ್ನು ಅದು ವೀಕ್ಷಕರಿಗೆ ಪರಿಚಯ ಮಾಡಿಕೊಡುತ್ತದೆ. ಮೊಬೈಲ್ ಹಾವಳಿಯಲ್ಲಿ ಪುಸ್ತಕ ಸಂಗ್ರಹಿಸುವ ಮತ್ತು ಹಂಚುವ ಸಂಸ್ಕೃತಿಯನ್ನು ಅದು ಬೆಳೆಸುತ್ತಿದೆ. ಇದುವೇ ಸರಸ್ವತಿ ಪೂಜೆ ಎನ್ನುವ ತಿಳಿವಳಿಕೆಯನ್ನು ಈ ಕಾರ್ಯಕ್ರಮ ನೀಡುತ್ತಿದೆ. ಮಾನವೀಯ ಮೌಲ್ಯ ಮತ್ತು ಸಾಮಾನ್ಯ ಜ್ಞಾನವನ್ನು ವಿಸ್ತರಿಸುವ ಇಂತಹ ಕಾರ್ಯಕ್ರಮಗಳು ಜ್ಞಾನವನ್ನು ವಿಸ್ತರಿಸುವಲ್ಲಿ ಸಹಕಾರಿ ಆಗುತ್ತವೆ.

—ಕುಬೇರಪ್ಪ ಎಂ. ವಿಭೂತಿ, ಹರಿಹರ

‘ಥಟ್ ಅಂತ ಹೇಳಿ’ ನನ್ನ ನೆಚ್ಚಿನ ಕಾರ್ಯಕ್ರಮ. ಪ್ರಸಾರದ ವೇಳೆಗೆ ಸರಿಯಾಗಿ ಬಿಳಿ ಹಾಳೆ ಮತ್ತು ಪೆನ್ನನ್ನು ಹಿಡಿದು ಕೂರುವುದು ನನ್ನ ಅಭ್ಯಾಸ. ಇತ್ತೀಚಿನ ಒಂದು ಕಾರ್ಯಕ್ರಮದಲ್ಲಿ ಲೆಕ್ಕ ತಪ್ಪಾಗಿತ್ತು. ನಿರೂಪಕರು ಹೇಳಿದ ಲೆಕ್ಕದಲ್ಲಿ ಕೂಡುವುದು, ಕಳೆಯುವುದು ಗುಣಿಸುವುದು ಸರಿಯಾಗಿತ್ತು, ಆದರೆ ಭಾಗಿಸುವ ಸಂದರ್ಭದಲ್ಲಿ ತಪ್ಪಾಗಿತ್ತು. ಈ ಪ್ರಶ್ನೆಗೆ ಸ್ಪರ್ಧಿಗಳಲ್ಲಿ ಮೂವರು ಉತ್ತರಿಸಲು ಆಗಲಿಲ್ಲ. 120ನ್ನು 8 ರಿಂದ ಭಾಗಿಸಿದರೆ ಉತ್ತರ 14 ಎಂದು ನಿರೂಪಕರು ಹೇಳಿದರು. ಅದುವೇ ಸರಿ ಎಂದು ಎಲ್ಲರೂ ಭಾವಿಸಿದರು. ಆದರೆ ಸರಿಯಾದ ಉತ್ತರ 15 ಆಗಬೇಕಿತ್ತು.

—ಕೆ.ಎಸ್. ಪ್ರಭಾಕರ್ ಗುಪ್ತ

### ಹಾಸ್ಯ ಪಾತ್ರಗಳೇ ಮರೆಯಾಗಿವೆ

ಇತ್ತೀಚೆಗೆ ಪ್ರಸಾರ ಆಗುತ್ತಿರುವ ಧಾರಾವಾಹಿಗಳಲ್ಲಿ ಹಾಸ್ಯ ಪಾತ್ರಗಳು ಕಾಣುವುದೇ ಇಲ್ಲ. ನಗುವುದೇ ಮರೆತು ಹೋದ ಹಾಗೆ ಅನುಮಾನ ಬರುತ್ತದೆ. ಖಳನಾಯಕಿಯರು ಜೈಲಿನಲ್ಲಿಯೇ ಕುಳಿತು ವಿಷ ಚಕ್ರ ವ್ಯೂಹ ಹೆಣೆಯುವುದು ಯಾವ ರೀತಿಯ ರಂಜನೀಯ? ಊಹಿಸಲೂ ಆಗದ ಖಳನಾಯಕಿಯರ ಮಗಳ ಪಾತ್ರಗಳ ಕುಕೃತ್ಯಗಳ ಸರಮಾಲೆ ಈಗ ಸಾಮಾನ್ಯವಾಗಿದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು